2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆ: 71/2025

ಪಿ.ಡಬ್ಲು: 4 ಸಿಡಬ್ಲು: 8

| | | |
|---|---|---|
| ಸಾಕ್ಷಿಯ ಹೆಸರು | : | ಡಾ. ಸುನಿಲ್ ಕುಮಾರ್ ಕೆ.ಆರ್ |
| ತಂದೆ ಹೆಸರು | : | ಟಿ. ಆರ್ ಕೃಷ್ಣ ಮೂರ್ತಿ |
| ವಯಸ್ಸು | : | 43 ವರ್ಷ |
| ವೃತ್ತಿ | : | ಸೀನಿಯರ್ ಸ್ಪೆಶಲಿಸ್ಟ, ಟ್ರಾಮಾ ಕೇರ್ ಸೆಂಟರ್ ಬಳ್ಳಾರಿ |
| ವಾಸಸ್ಥಳ | : | ಬಳ್ಳಾರಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ: 28.07.2026.

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:-

1) ನಾನು ದಿನಾಂಕ 2023 ರಿಂದ ಇಲ್ಲಿಯವರೆಗೆ ಟ್ರಾಮಾ ಕೇರ್ ಸೆಂಟರ್ ಬಳ್ಳಾರಿಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2) ದಿನಾಂಕ 22.09.2024 ರಂದು ಸಂಜೆ 07.48 ಗಂಟೆ ಸಮಯದಲ್ಲಿ ಚಾಸಾ-1 ಹಲ್ಲೆಗೊಳಗಾದ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿದ್ದಳು. ನಾನು ಅವಳನ್ನು ಪರೀಕ್ಷೆ ಮಾಡಿ ನೋಡಿದಾಗ ಅವಳ ಎಡ ಭುಜ ಮತ್ತು ಬಲ ಮೊಣಕಟ್ಟಿನಲ್ಲಿ ಮುಟ್ಟಿದರೆ ನೋವು ಇತ್ತು. ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳು ಆಗಿದ್ದವು. ನಾನು ಈ ಬಗ್ಗೆ ನಮೂದಿಸಿ ತನಿಖಾಧಿಕಾರಿಗೆ ಚಾಸಾ-1 ರವರ ಗಾಯ ಪ್ರಮಾಣ ಪತ್ರವನ್ನು ನೀಡಿದ್ದೆ. ಸಾಕ್ಷಿ ಗುರುತಿಸಿದ ಗಾಯ ಪ್ರಮಾಣ ಪತ್ರವನ್ನು ನಿಪಿ-5 ಎಂದು ಹಾಗು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಕೈ ಕಾಲುಗಳಿಂದ ಹಲ್ಲೆ ಮಾಡಿದಲ್ಲಿ ನಿಪಿ-5 ರಲ್ಲಿ ನಮೂದಿಸಿರುವ ನೋವು ಕಂಡು ಬರುವ ಸಾಧ್ಯತೆ ಇದೆ ಎಂದರೆ ಸರಿ.

ಪಾಟೀಸವಾಲು ಆರೋಪಿ ಪರವಾಗಿ ಶ್ರೀ ವೈ.ಕೆ. ವಕೀಲರಿಂದ:

3) ಗಾಯಳು ಬಂದ ಸಮಯದ ಬಗ್ಗೆ ಡೈರಿಯಲ್ಲಿ ನಮೂದಿಸಿದ್ದೇನೆ. ಅದನ್ನು ಹಾಜರು ಪಡಿಸಿಲ್ಲ. ಕೆಳಗೆ ಬಿದ್ದಲ್ಲಿ ಅಥವಾ ಗೋಡೆಗೆ ಡಿಕ್ಕಿ ಹೊಡೆದಲ್ಲಿ ನಿಪಿ-5 ರಲ್ಲಿ ನಮೂದು ಮಾಡಿರುವ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿ. ಸದರಿ ಗಾಯಗಳು ಯಾವ ಕಾರಣದಿಂದಾಗಿ ಆಗುತ್ತದೆ ಎಂದು ನಿಖರವಾಗಿ ಹೇಳಲು

ಆಗುವುದಿಲ್ಲ. ಈ ಕೇಸಿಗೆ ಅನುಕೂಲವಾಗುವಂತೆ ಪೊಲೀಸರ ಮಾತು ಕೇಳಿಕೊಂಡು ನಿಪಿ-5 ರಂತೆ ಸುಳ್ಳು ಗಾಯ ಪ್ರಮಾಣ ಪತ್ರವನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿಗೆ ಅನುಕೂಲವಾಗುವಂತೆ ಸುಳ್ಳು ಗಾಯ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**